**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**<u>ಸಿ.ಸಿ.ಸಂಖ್ಯೆ: 1702/2019</u>**

**ಪಿರ್ಯಾದಿ** : ಸರ್ಕಾರದ ಪರಃ ಬಿಳಿಗೆರೆ ಪೊಲೀಸರು

**ವಿರುದ್ಧ**

**ಆರೋಪಿ** : ಬಸವಣ್ಣ ಉಃ ಟ್ರ್ಯಾಕ್ಟರ್ ಬಸವರಾಜು, ಬಿನ್ ರಂಗಯ್ಯ, 42 ವರ್ಷ
ಜಿ.ಮರಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು,

**<u>ದೋಷಾರೋಪಣೆ</u>**

*ಶ್ರೀ ಕಿಶೋರ್ ಕುಮಾರ್ ಎಂ., 1 ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕಃ 21.06.2019 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಬಿಳಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಜೀಮಾರಳ್ಳಿ ಗ್ರಾಮದ ಶ್ರೀಗಣಪತಿ ದೇವಸ್ಥಾನದ ಬಳಿಯಿರುವ ಬಸ್ ನಿಲ್ದಾಣದಲ್ಲಿ ಜೀಮಾರಳ್ಳಿ - ಬಿಳುಗಲಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಚಾಸಾ-1 ರವರು ಕೆ.ಎಸ್.ಆರ್.ಟಿ.ಸಿ. ಬಸ್ ನಂ.ಕೆಎ-11/ಎಫ್-0160 ರೂಟ್ ನಂಬರ್ 346/1 ಎ ರ ಚಾಲಕರಾಗಿ ಪ್ರಯಾಣಿಕರನ್ನು ಇಳಿಸಲು ಬಸ್ ನಿಲ್ಲಿಸಿದಾಗ, ಆರೋಪಿತರಾದ ನೀವು ಚಾಸಾ-1 ರವರಿಗೆ ನಾನು ಸುತ್ತೂರು ಗ್ರಾಮದಲ್ಲಿ ಕೈ ತೋರಿಸಿದರು ಸಹಾ ಬಸ್ಸನ್ನು ನಿಲ್ಲಿಸಲಿಲ್ಲ ಎಂದು ಗಲಾಟೆಮಾಡುತ್ತಿದ್ದಾಗ, ಚಾಸಾ-1 ಮತ್ತು 2 ರವರು ಬಸ್ಸಿನಿಂದ ಕೆಳಗಿಳಿದು ನೀವು ಕೈ ತೋರಿಸಿದ್ದನ್ನು ನೋಡಲಿಲ್ಲಾ ಎಂದು ಹೇಳುತ್ತಿದ್ದಂತೆ, ಆರೋಪಿತರಾದ ನೀವು ಚಾಸಾ-1 ರವರ ಜೊತೆ ಕೂಗಾಡುತ್ತಾ ಬೋಳಿಮಗನೇ, ಸೂಳೆಮಗನೇ, ಈ ಬಸ್ ನಿಮ್ಮಪ್ಪಂದ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿ ಶಾಂತಿ ಭಂಗಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 504 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಚಾಸಾ-1 ಮತ್ತು 2 ರವರಿಗೆ ತಮ್ಮ ಕರ್ತವ್ಯವನ್ನು ನಿರ್ವಹಿಸದಂತೆ ಬೆದರಿಸುವ ಉದ್ದೇಶದಿಂದ ಸ್ವ-ಇಚ್ಚೆಯಿಂದ ಚಾಸಾ-1 ರವರ ಮುಖಕ್ಕೆ, ಎಡಗಣ್ಣಿಗೆ ಕೈಗಳಿಂದ ಗುದ್ದಿ, ಅವರ ಎಡಕೈನ ಮೊಣಸಂದಿಗೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಉಂಟುಮಾಡಿದ

ಕಾರಣ ಭಾರತ ದಂಡ ಸಂಹಿತೆ ಕಲಂ 332 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

**ಃ ಆಪಾದನೆ ಃ**

ಪ್ರಶ್ನೆ1 ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ ಃ ತಿಳಿಯಿತು

ಪ್ರಶ್ನೆ2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ ವಿಚಾರಣೆಯಾಗಬೇಕು

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 08.06.2023 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

ಸಹಿ/-

**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ನಂಜನಗೂಡು**